## ನಿಮಗ್ಯಾಕೆ ತೊಂದ್ರೆ?

ಬಿರು ಬಿಸಿಲಿನ ಒಂದು ಮಧ್ಯಾಹ್ನ ಊಟ ಮುಗಿಸಿಕೊಂಡು ಬ್ಯಾಂಕ್‌ಗೆ ಬಂದ ಮ್ಯಾನೇಜರ್. ಬ್ಯಾಂಕಿನ ಎದುರು, ಮರದ ನೆರಳಿಗೆ ಕಾರು ಪಾರ್ಕ್ ಮಾಡುವ ಜಾಗದಲ್ಲಿ ಹತ್ತಾರು ಎಮ್ಮೆಗಳು ಅಡ್ಡಾದಿಡ್ಡಿಯಾಗಿ ಮಲಗಿದ್ದನ್ನು ಕಂಡು, ಕೋಪದಿಂದ ಹಾರ್ನ್ ಮಾಡತೊಡಗಿದರು. ಬ್ಯಾಂಕಿನ ಒಳಗಿದ್ದ ಜವರಣ್ಣ ಲಗುಬಗೆಯಿಂದ ಓಡಿ ಬಂದ. 'ಯಾರಯ್ಯ ನೀನು? ಎಮ್ಮೆಗಳನ್ನೆಲ್ಲಾ ಬ್ಯಾಂಕ್ ಮುಂದೆ ಯಾಕೆ ತಂದು ಕಟ್ಟಿದ್ದೀಯ?' ಎಂದು ರೇಗಿದರು. ಜವರಣ್ಣ, 'ಸ್ವಾಮ್ಯಾರಾ, ಮನೆ ರಿಪೇರಿ ಸಾಲ ಕೇಳಿದಾಗ ನೀವು ಮನೆ ನೋಡ್ಬೇಕು ಅಂತ ಖುದ್ದಾಗಿ ಬಂದಿದ್ರಲ್ವಾ... ಈ ದಪಾ, ಮೇವು ಸಾಲಕ್ಕೆ ಬಂದಿದ್ದೆ, ಎಮ್ಗಳನ್ನ ನೋಡೋಕೆ ಅಲ್ಲಿಗಂಟಾ ಬರೋ ತೊಂದ್ರೆ ನಿಮ್ಯಗ್ಯಾಕೆ ಅಂತ ನಾನೇ ಎಮ್ಗಳುನ ತಂದು ನಿಲ್ಸಿವ್ನಿ' ಎಂದ.

**ಅರವಿಂದ ಜಿ. ಜೋಷಿ**





ಕಲೆ: ಗಣೇಶ ಆಚಾರ್ಯ

## ಗೊತ್ತಿದ್ದೇ ಬಂದಿದ್ದು...

ಗಾಳಿ ಗಂಗಮ್ಮ ತನ್ನ ಗಂಡ ಎಷ್ಟೇ ಹಟ ಮಾಡಿದರೂ ಅವನನ್ನು ಬಿಡದೆ ಆಸ್ಪತ್ರೆಗೆ ಕರೆತಂದಳು. ವೈದ್ಯರು, 'ಏನಮ್ಮ ತೊಂದ್ರೆ?' ಎಂದು ಕೇಳಿದಾಗ, 'ನಮ್ಮ ಯಜಮಾನ್ರನ್ನ ನೋಡ್ಬೇಕು ಡಾಕ್ಟರೆ' ಅಂದಳು. 'ಅಯ್ಯೋ, ನಾನು ನಿಮ್ಮ ಯಜಮಾನರನ್ನ ನೋಡಾಕಾಗಲ್ಲಮ್ಮ, ನಾನು ಪಶುವೈದ್ಯ!' ಎಂದರು. ಗಾಳಿ ಗಂಗಮ್ಮ, 'ಗೊತ್ತಿದ್ದೇ ನಿಮ್ಮ ತಾವ ಕರಕೊಂಡು ಬಂದಿದ್ದೀನಿ ಡಾಕ್ಟರೇ, ಅವರಿಗೆ ರಾತ್ರಿ ನಿದ್ರೆಯಲ್ಲಿ ಒದೆಯುವ ಅಭ್ಯಾಸವಿದೆ' ಎಂದಳು.

**ಕೆ. ಆದಿತ್ಯ ಹೆಬ್ಬಾರ್**